| | | |
|---|---|---|
| ಓ ಎಸ್ | 26/2014 | ಡಿ.ಡಬ್ಲ್ಯೂ 3 |

ಇಂದು ದಿಃ 07.03.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎ ಎನ್ ವಕೀಲರಿಂದಃ-

ನಿ ಪಿ 20 ರಲ್ಲಿ ನನ್ನ ತಂದೆಯ ಹೆಸರು ಚಲುವಯ್ಯ ಎಂದು ಇರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆ ಹೆಸರು ಚಲುವಯ್ಯ ಎಂದು ಇದೆ ಎಂದರೆ ಸರಿ. ನಿ ಪಿ 20 ರಲ್ಲಿ ಸಿಂಗಯ್ಯ ಚಲುವಯ್ಯ ಎಂದು ಇಲ್ಲ ಎಂದರೆ ಸರಿ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆ ಹೆಸರು ಸಿಂಗಯ್ಯ ಚಲುವಯ್ಯ ಎಂದು ಇಲ್ಲ ಎಂದರೆ ಸರಿ. ನಿ ಡಿ 26 ದಾನಪತ್ರದಲ್ಲಿ ಹೇಳಿದ ಒಕ್ಕಣೆಗಳಿಗೂ ನನಗೂ ನನ್ನ ತಂದೆ ತಾಯಿಗೂ, ನನ್ನ ಅಣ್ಣನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು. ದಿಃ15.09.1958 ರಂದು ನಿ ಡಿ 26 ದಾನಪತ್ರದಲ್ಲಿ ಹೇಳಿರುವ ಸಿಂಗ್ರಯ್ಯನ ಚಲುವಯ್ಯನ ಹೆಂಡತಿ ಪುಟ್ಟಮ್ಮನವರಿಗೆ ಮಕ್ಕಳು ಜನಿಸಿರಲಿಲ್ಲ ಎಂದು ಸದರಿ ದಾನಪತ್ರದಲ್ಲೆ ಒಕ್ಕಣೆ ಇದೆ ಎಂದರೆ ಸುಳ್ಳು. ದಿಃ15.09.1958 ರ ಮೊದಲೇ ನನ್ನ ತಾಯಿ ಪುಟ್ಟಮ್ಮನವರಿಗೆ ನನ್ನ ಅಣ್ಣ ವೆಂಕಟೇಶ್ ಜನಿಸಿದ್ದರು ಎಂದರೆ ಸುಳ್ಳು. ನನ್ನ ಅಣ್ಣನ ಜನ್ಮದಿನಾಂಕ 05.02.1958 ಎಂದರೆ ಸರಿ.

ಒ ಎಸ್ 81/2006 ರ ತೀರ್ಪಿನಲ್ಲಿರುವ ಯಾವುದೆ ಅಂಶಗಳು ಈ ದಾವೆಯ ವಾದಿಯರನ್ನು ಬದ್ಧಪಡಿಸುವುದಿಲ್ಲ ಎಂದರೆ ಸುಳ್ಳು. ಒ ಎಸ್ 81/2006 ರಲ್ಲಿ ಈ ದಾವೆಯ ವಾದಿಯವರನ್ನು ಗೌರಮ್ಮನವರ ವಾರಸುದಾರು ಎಂದು ಪಕ್ಷಗಾರರನ್ನಾಗಿ ಮಾಡದ ಕಾರಣ ಸದರಿ ದಾವೆಯ ತೀರ್ಪು ಸಂಪೂರ್ಣ ಶೂನ್ಯ ಎಂದರೆ ಸುಳ್ಳು. ದಿಃ30.11.2013 ರಂದು ನನ್ನ ಅಣ್ಣ 4 ನೇ ಪ್ರತಿವಾದಿ, 1 ನೇ ವಾದಿ ಶಶಿರೇಖಾ ರವರಿಗೆ ಒ ಎಸ್ 81/2006 ಮತ್ತು ಆರ್ ಎ 22/2009 ರಲ್ಲಿ ಆದ ತೀರ್ಪಿನ ಪ್ರತಿಗಳನ್ನು ತೋರಿಸಿರುತ್ತಾರೆ ಎಂದರೆ ಸುಳ್ಳು. ದಿಃ30.11.2013 ರಂದು 1 ನೇ ವಾದಿ ಶಶಿರೇಖಾರವರಿಗೆ ಸದರಿ ದಾವೆ ಮತ್ತು ಮೇಲ್ಮನವಿಯ ಬಗ್ಗೆ ತಿಳಿದುಬಂತು ಎಂದರೆ ನನಗೆ ಗೊತ್ತಿಲ್ಲ.

| | | |
|---|---|---|
| ಓ ಎಸ್ | 26/2014 | ಡಿ.ಡಬ್ಲ್ಯೂ: 3 |

ಎಫ್ ಡಿ ಪಿ 24/2014 ರಲ್ಲಿ ಈ ದಾವೆಯ ವಾದಿಯರಾದ ಶಶಿರೇಖಾ ಮತ್ತು ಶೈಲಾ ಪಕ್ಷಗಾರರಲ್ಲ ಎಂದರೆ ನನಗೆ ಗೊತ್ತಿಲ್ಲ. ಎಫ್ ಡಿ ಪಿ 24/2014 ರಲ್ಲಿ ಆದ ಆದೇಶ ಸಂಪೂರ್ಣ ಶೂನ್ಯ ಎಂದರೆ ಸುಳ್ಳು. ಒ ಎಸ್ 81/2006 ರಲ್ಲಿ ವಾದಿಯರನ್ನು ಗೌರಮ್ಮನವರ ವಾರಸುದಾರರು ಎಂದು ಪಕ್ಷಗಾರರಾಗಿ ಮಾಡದ ಕಾರಣ ಸದರಿ ದಾವೆ ಪೂರ್ಣವಾಗಿ abate ಆಗಿರುತ್ತದೆ ಎಂದರೆ ಸುಳ್ಳು. ವಾದಿಯರ ಮುತ್ತಾತ ಪಲ್ಲಿ ಮಂಚಯ್ಯನವರಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸುಳ್ಳು. ವಾದಿಯರ ಅಜ್ಜ ಜವರಯ್ಯನವರಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸುಳ್ಳು. ವಾದಿಯರ ಅಜ್ಜಿ ಸಿದ್ದಮ್ಮನಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸುಳ್ಳು. ವಾದಿಯರ ತಾಯಿ ಗೌರಮ್ಮನವರಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಂಬಂಧವಿದೆ ಅವರು ನಮ್ಮ ದೊಡ್ಡಮ್ಮ ಎಂದು ಸಾಕ್ಷಿ ನುಡಿಯುತ್ತಾರೆ. ಗೌರಮ್ಮ ನಮ್ಮ ದೊಡ್ಡಮ್ಮ ಎಂದು ಹೇಳುವುದು ಸುಳ್ಳು ಎಂದರೆ ಸುಳ್ಳು. ವಾದಿಯರಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ನಾವು ಅವರು ಅಕ್ಕತಂಗಿಯರ ಮಕ್ಕಳು ಎಂದು ಸಾಕ್ಷಿ ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಕುಟುಂಬವೇ ಬೇರೆ ಮತ್ತು ನಮ್ಮ ಕುಟುಂಬವೇ ಬೇರೆ ಎಂದರೆ ಸುಳ್ಳು.

ದಾವೆಯ ಅನುಸೂಚಿ ಸ್ವತ್ತುಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸುಳ್ಳು. ನನ್ನ ಪ್ರಮಾಣಪತ್ರದ ಖಂಡಿಕೆ 1 ರಿಂದ 22 ರಲ್ಲಿ ಹೇಳಿದ ವಿಚಾರಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.